ಶ್ರೀ ಎ.ಆರ್. ಕೃಷ್ಣಮೂರ್ತಿ :— ಮಾನ್ಯ ಅಧ್ಯಕ್ಷರೆ, ಇದನ್ನು ೧೭ನೇ ತಾರೀಖಿನ ದಿವಸವೇ ತೆಗೆದುಕೊಳ್ಳಬೇಕಾಗಿತ್ತು. ಅವತ್ತಿನ ದಿವಸ ಮಾನ್ಯ ಮಂತ್ರಿಯವರು ಈ ಸದನದಲ್ಲಿದ್ದರು. ಆಗ ತಾವು ಅವಕಾಶ ಮಾಡಿಕೊಟ್ಟಿದ್ದರೆ ಈ ಪ್ರಶ್ನೆ ಇವತ್ತಿನವರೆಗೆ ಮುಂದುವರಿಯುತ್ತಿರಲಿಲ್ಲ.

ಅಧ್ಯಕ್ಷರು :— ಮಾನ್ಯ ಸಚಿವರು ಇವತ್ತು ಬರುವುದಿಲ್ಲವೆಂದು ಪತ್ರ ಬರೆದಿದ್ದಾರೆ. ಆದ್ದರಿಂದ ನಾಳೆ ತೆಗೆದುಕೊಳ್ಳುತ್ತೇನೆ. ಒಂದು ದಿವಸದಲ್ಲಿ ಏನೂ ಆಗುವುದಿಲ್ಲ.

ತೋಟಗಾರಿಕಾ ವಲಯದಲ್ಲಿ ರೈತರಿಗೆ ಮೂಲಭೂತ ಸೌಕರ್ಯ ಒದಗಿಸುವುದು.

495(4554) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :— ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಷ್ಟ್ರೀಯ ಹೈನುಗಾರಿಕಾ ಅಭಿವೃದ್ಧಿ ನಿಗಮವು (ಎನ್.ಡಿ.ಡಿ.ಬಿ) ರಾಜ್ಯದಲ್ಲಿ ತೋಟಗಾರಿಕೆ ವಲಯದಲ್ಲಿ ರೈತರಿಗೆ ಮೂಲಭೂತ ಸೌಕರ್ಯ ಒದಗಿಸಲು ಹಾಗೂ ಅಭಿವೃದ್ಧಿಗೊಳಿಸಲು ವಿಷೇಶ ಯೋಜನೆಯನ್ನೇನಾದರೂ ರೂಪಿಸಿದೆಯೇ?

ಆ) ಹಾಗಿದ್ದಲ್ಲಿ ಇದರ ವಿವರಗಳೇನು?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕಾ ರಾಜ್ಯ ಸಚಿವರು) :—

ಅ) ಎನ್.ಡಿ.ಡಿ.ಬಿ.ಯು ಬೆಂಗಳೂರಿನಲ್ಲಿ ಒಂದು ಬೃಹತ್ ತೋಟಗಾರಿಕೆ ಸಂಕೀರ್ಣವನ್ನು (ಟರ್ಮಿನಲ್ ಮಾರುಕಟ್ಟೆ) ನಿರ್ಮಿಸುವ ಸಲುವಾಗಿ ರೂ. 150 ಕೋಟಿಗಳ ಬಂಡವಾಳದಲ್ಲಿ ಕನ್ನಮಂಗಲ ತೋಟಗಾರಿಕೆ ಕ್ಷೇತ್ರದಲ್ಲಿ 60 ಎಕರೆ ಜಮೀನನ್ನು ಎನ್.ಡಿ.ಡಿ.ಬಿ.ಗೆ ನೀಡಲು ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ.

ಆ) ಯೋಜನೆಯ ವಿವರವಾದ ರೂಪುರೇಷೆಗಳನ್ನು ಎನ್.ಡಿ.ಡಿ.ಬಿ. ಸಂಸ್ಥೆಯು ಸಿದ್ಧಪಡಿಸುತ್ತಿದೆ.

ಶ್ರೀ ಎಂ.ಎಸ್. ಆತ್ಮಾನಂದ :— ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ರೈತರ ಕಾಳಜಿಯನ್ನು ನೋಡಿಕೊಂಡು ತೋಟಗಾರಿಕೆ ವಲಯದಲ್ಲಿ ರೈತರಿಗೆ ಮೂಲಭೂತ ಸೌಕರ್ಯ ಒದಗಿಸಲು ಎನ್.ಡಿ.ಡಿ.ಬಿ. ಸಂಸ್ಥೆಯವರು ಮುಂದೆ ಬಂದಿರತಕ್ಕಂಥಾದ್ದು ಬಹಳ ಸ್ವಾಗತಾರ್ಹವಾದ ವಿಚಾರವಾಗಿದೆ. ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಂಡಿರುವುದರಿಂದ ನಾನು ಒಳ್ಳೆಯ ಮನಸ್ಸಿನಿಂದ ಸರ್ಕಾರವನ್ನು ಅಭಿನಂದಿಸುತ್ತೇನೆ. ತೋಟಗಾರಿಕೆ ಸಂಕೀರ್ಣವನ್ನು ಸುಮಾರು 150 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿ

ಮುಗಿಸುತ್ತೇವೆ ಎನ್ನತಕ್ಕಂಥದ್ದನ್ನುಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಆದ್ದರಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರೈತರು ಇವತ್ತಿನ ದಿವಸ ತೋಟಗಾರಿಕೆ ಬೆಳೆಯನ್ನು ಬೆಳೆಯುತ್ತಿದ್ದಾರೆ. ಈ ಒಂದು ಟರ್ಮಿನಲ್ ಮಾರುಕಟ್ಟೆಯಿಂದ ಇತರ ಬೆಳೆಗಾರರಿಗೂ ಏನಾದರೂ ಅನುಕೂಲವಾಗುತ್ತದೆಯೇ? ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಹಾಗೆಯೇ ಯೋಜನೆಯ ವಿವರವಾದ ರೂಪುರೇಷೆಗಳನ್ನು ಎನ್.ಡಿ.ಡಿ.ಬಿ. ಸಂಸ್ಥೆಯು ಸಿದ್ಧಪಡಿಸುತ್ತಿದೆ ಎಂದು ತಿಳಿಸಿದ್ದೀರಿ. ಆದ್ದರಿಂದ ಸದರಿ ರೂಪುರೇಷೆಗಳಿಂದ ರೈತರಿಗೆ ಯಾವರೀತಿ ಅನುಕೂಲವಾಗುತ್ತದೆ ಎನ್ನತಕ್ಕಂಥಾದ್ದನ್ನು ತಿಳಿಸಬೇಕು. ಹಾಗೆಯೇ ತೋಟಗಾರಿಕೆ ವಲಯದಲ್ಲಿ ರೈತರಿಗೆ ಮೂಲಭೂತ ಸೌಕರ್ಯ ಒದಗಿಸಲು ಎಷ್ಟು ಸಹಾಯಧನವನ್ನು ನೀಡುತ್ತಿದೆ ಎನ್ನತಕ್ಕಂಥಾದ್ದನ್ನು ಇಲ್ಲಿ ಸ್ಪಷ್ಟಪಡಿಸಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ :— ಮಾನ್ಯ ಅಧ್ಯಕ್ಷರೆ, ಧಾರವಾಡದಲ್ಲಿ ಕೃಷಿ ಸಭೆ ಆದನಂತರ ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ಬಹಳಷ್ಟು ವ್ಯವಸ್ಥಿತವಾದ ಯೋಜನೆಗಳನ್ನು ಮಾನ್ಯ ಮುಖ್ಯಮಂತ್ರಿಯವರು ಹಾಕಿಕೊಂಡಿದ್ದಾರೆ. ಈ ಯೋಜನೆಯಲ್ಲಿ ಎನ್.ಡಿ.ಡಿ.ಬಿ.ಯ ಕಾರ್ಯವೂ ಸಹ ಸೇರಿದೆ. ಇದು ದಕ್ಷಿಣ ಭಾರತದಲ್ಲಿ ಮೊಟ್ಟಮೊದಲನೆಯದಾಗಿ ಸುಮಾರು ೧೫೦ ಕೋಟಿ ರೂಪಾಯಿಗಳ ಒಂದು ಯೋಜನೆ ಇದಾಗಿದೆ. ಇವತ್ತಿನದಿವಸ ಇದರ ಒಂದು ಕೆಪಾಸಿಟಿಯಿಂದ ಸುಮಾರು ಒಂದು ಸಾವಿರ ಟನ್‌ನಷ್ಟು ತರಕಾರಿ ಮತ್ತು ಹಣ್ಣುಗಳನ್ನು ಸಂಸ್ಕರಣ ಮಾಡತಕ್ಕಂಥ ಒಂದು ವ್ಯವಸ್ಥೆಯಾಗಿದೆ. ಈ ಒಂದು ಯೋಜನೆಯನ್ನು ಮೊಟ್ಟಮೊದಲನೆಯದಾಗಿ ಈಗ ದೆಹಲಿಯಲ್ಲಿ ಪ್ರಾರಂಭ ಮಾಡಲಾಗಿದೆ. ಎನ್.ಡಿ.ಡಿ.ಬಿ.ಯವರು ಮತ್ತೆ ಐದಾರು ರಾಜ್ಯಗಳಲ್ಲಿ ಈ ಒಂದು ಯೋಜನೆಯನ್ನು ಸ್ಥಾಪನೆ ಮಾಡುತ್ತಾರೆಂದು ನಮಗೆ ತಿಳಿದ ಕೂಡಲೇ ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ನಾವು ಗುಜರಾತಿಗೆ ಹೋಗಿ ಅವರ ಮನವೊಲಿಸಿದ್ದಕ್ಕಾಗಿ ಇವತ್ತಿನ ದಿವಸ 150 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಅವರು ಮಾಡಿದ್ದಾರೆ. ಇವತ್ತು ನಮ್ಮ ಹಾಪ್‌ಕಾಮ್ಸ್‌ನ ಮೂಲಕವಾಗಿ ಬೆಂಗಳೂರು ಮತ್ತು ಸುತ್ತಮುತ್ತಲಿನ ವ್ಯವಹಾರವು ಕೇವಲ 100 ಟನ್‌ಗಿಂತ ಹೆಚ್ಚಿಗೆ ಮಾಡುತ್ತಿಲ್ಲ, 1,000ಟನ್‌ನ ಕೆಪ್ಯಾಸಿಟಿ ಇದೆ. ಇದು ಕೇವಲ ಬೆಂಗಳೂರು ರೈತರಿಗೆ ಮಾತ್ರವಲ್ಲದೆ ನಮ್ಮ ರಾಜ್ಯದ ಸುತ್ತಮುತ್ತಲಿರುವ ವಿಶೇಷವಾದ ಯಾವುದಾದರೂ ಹಣ್ಣು ಮತ್ತು ಕಾಯಿಪಲ್ಯೆಗಳನ್ನು ಬೆಳೆದಲ್ಲಿ ಅಲ್ಲಿಯೂ ಕೂಡ ಅದನ್ನು ಖರೀದಿಸಿ ಅದನ್ನು ಕ್ರೋಢೀಕರಿಸಿ ಮಾರ್ಕೆಟಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ. ಈಗಾಗಲೇ ನಾವು ಕನ್ನಮಂಗಲದಲ್ಲಿ ಸುಮಾರು 60 ಏಕರೆ ಜಾಗವನ್ನು ಕೊಟ್ಟಿದ್ದೇವೆ. ಇನ್ನು ಕೆಲವೇ ದಿವಸಗಳಲ್ಲಿ ಇದಕ್ಕೆ ಶಂಕುಸ್ಥಾಪನೆಯನ್ನು ಮಾಡಿ ಈ ಕಾರ್ಯವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ :— ಮಾನ್ಯ ಅಧ್ಯಕ್ಷರೆ, ಇದರಿಂದ ಹೊರದೇಶಕ್ಕೂ ಕೂಡ ರಫ್ತು ಮಾಡತಕ್ಕಂತಹ ಸೌಲಭ್ಯ ನಮ್ಮ ತೋಟಗಾರಿಕಾ ಉತ್ಪನ್ನಗಳಿಗೆ ದೊರಕುತ್ತದೆಯೇ? ಈಗಾಗಲೇ ಮಾನ್ಯ ಸಚಿವರು ಹಾಪ್‌ಕಾಮ್ಸ್ ವಿಷಯವನ್ನು ಹೇಳಿದರು, ರೈತರು ಬೆಳೆದ ಉತ್ಪನ್ನಗಳ ಮಾರಾಟಕ್ಕೆಂದು ಇರುವ ಹಾಪ್‌ಕಾಮ್ಸ್ ಸಂಸ್ಥೆ, ಕರ್ನಾಟಕ ಹಾರ್ಟಿಕಲ್ಚರ್ ಫೆಡರೇಷನ್, ಡಿಸ್ಟ್ರಿಕ್ಟ್ ಆಫೀಸ್‌ಗಳು ಹೀಗೆ 3 ಮಾರಾಟದ ವ್ಯವಸ್ಥೆ ಇದ್ದು, ಅದು ಏಕರೂಪವಾಗಿ ಒಂದು ಸಂಸ್ಥೆಯಡಿ ಬರತಕ್ಕದ್ದು ಬಹಳ ಅವಶ್ಯಕತೆ ಇದೆ. ಅದರ ಬಗ್ಗೆಯೂ ಕೂಡ ಸರ್ಕಾರವು ಪರ್ಯಾಲೋಚಸಬೇಕೆಂಬ ನಿವೇದನೆಯನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಇಟ್ಟು, ಈ ಒಂದು ಪ್ರಯತ್ನಕ್ಕಾಗಿ ಮಾನ್ಯ ತೋಟಗಾರಿಕಾ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು ಅಭಿನಂದನಾರ್ಹರು. ಈ ಒಂದು ಮಾರುಕಟ್ಟೆಯ ವ್ಯವಸ್ಥೆಯನ್ನು ರಾಜ್ಯವ್ಯಾಪ್ತಿ ವಿಸ್ತರಿಸುವುದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ :— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಎಂ.ಎಸ್. ಆತ್ಮಾನಂದರವರು ಕೇಳಿದಂತಹ ಅನುಮಾನವೇ ನನಗೂ ಕೂಡ ಇದೆ. ಈ ಯೋಜನೆ 1987 ರಿಂದ ಪ್ರಾರಂಭವಾದಾಗಿನಿಂದ ಮೂಲಭೂತವಾಗಿ ಒಂದು ಸಮಸ್ಯೆ ಇದೆ. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸ್ವಲ್ಪ ನಿಧಾನವಾಗುತ್ತಿದೆ. ಆ ಸಮಸ್ಯೆ ಯಾವುದೆಂದರೆ, ನಮ್ಮ ಆರ್‌ಎಂಸಿ ಯಾರ್ಡ್‌ನಲ್ಲಿಯೂ ಹಾಪ್‌ಕಾಮ್ಸ್‌ನವರು ಸಹ ವ್ಯವಹಾರವನ್ನು ಮಾಡುತ್ತಾರೆ. ಈಗ ಎಸ್‌ಡಿಡಿಬಿಯಿಂದ ನಾವು ಮಾಡುತ್ತಿರುವ ನೂತನ ಯೋಜನೆಯಲ್ಲಿಯೂ ಕೂಡ ಇದೇ ವ್ಯವಹಾರವನ್ನು ಮಾಡಬೇಕಾಗುತ್ತದೆ. ಆದ್ದರಿಂದ ಈ ಮೂರು ಸಂಘಗಳಿಗೂ ಯಾವ ರೀತಿಯಾಗಿ ಅವರವರ ವ್ಯಾಪ್ತಿಗಳನ್ನು ಡಿಫೈನ್ ಮಾಡುತ್ತಾರೆ, ಯಾರ್ಯಾರಿಗೆ ಯಾವ ಯಾವ ಕಾಯಿಪಲ್ಯ ಹಾಗೂ ಹಣ್ಣುಗಳನ್ನು ಡೀಲ್ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತಾರೆ ಅಥವಾ 3 ಜನರು ಓಪನ್ ಆಗಿ ಕಾಂಪಿಟ್ ಮಾಡಬಹುದಾ? ಅದರ ಬಗ್ಗೆ ಏನು ವ್ಯವಸ್ಥೆಯನ್ನು ಮಾಡಿದ್ದಾರೆಂಬ ಬಗ್ಗೆ ಮಂತ್ರಿಗಳಿಂದ ನನಗೆ ಉತ್ತರಬೇಕಾಗಿದೆ. ಆರ್‌ಎಂಸಿಯವರು ಹಾಪ್‌ಕಾಮ್ಸ್‌ನವರು ಯಾವುದನ್ನು ಮಾಡುಬೇಕು? ಈಗ ಬರುತ್ತಿರುವಂತಹ ಎಸ್‌ಡಿಡಿಬಿಯವರು ಯಾವುದನ್ನು ಮಾಡಬೇಕು? ಈ ಮೂರರ ಬಗ್ಗೆ ಮಾನ್ಯ ಮಂತ್ರಿಗಳು ದಯಮಾಡಿ ತಿಳಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ :— ಮಾನ್ಯ ಅಧ್ಯಕ್ಷರೆ, ನಾನು ದೆಹಲಿಯಲ್ಲಿ ಎಸ್‌ಡಿಡಿಬಿ ಹೇಗೆ ಕಾರ್ಯರೂಪ ಮಾಡುತ್ತರೆಂಬುದರ ಬಗ್ಗೆ ಭೇಟಿ ಮಾಡಿದ್ದೆ. ದೆಹಲಿಯಲ್ಲಿ ನಮ್ಮ ಕರ್ನಾಟಕದ ಹಾಪ್‌ಕಾಮ್ಸ್ ಏನು ಇದೆ, ಅದೇ ರೀತಿಯಾಗಿ ಔಟ್‌ಲೆಟ್ಸ್‌ನ್ನು ಅವರು ಕೂಡ ಇಟ್ಟುಕೊಂಡಿದ್ದಾರೆ. ಇದರಲ್ಲಿ ವಿಶೇಷವಾಗಿ ಕೋಲ್ಡ್ ಸ್ಟೋರೇಜ್, ಪ್ರೋಸೆಸಿಂಗ್

ಯೂನಿಟ್‌ನ್ನು ಇಟ್ಟಿದ್ದಾರೆ. ಅದೇ ರೀತಿಯಾಗಿ ಔಟ್‌ಲೆಟ್ಸ್‌ನ್ನು ಮಾಡುತ್ತಿದ್ದಾರೆ, ಇವತ್ತು ನಮ್ಮ ರಾಜ್ಯದಲ್ಲಿ ನಮ್ಮದೇ ಆದಂತಹ ವೈಶಿಷ್ಟ್ಯವಾದಂತಹ ಹಾಪ್‌ಕಾಮ್ಸ್ ಇದೆ. ಇಲ್ಲೂ ಕೂಡ ರೈತರಿಂದ ಖರೀದಿಸಿ ಔಟ್‌ಲೆಟ್ಸ್‌ನ್ನು ಮಾಡುತ್ತಿದ್ದೇವೆ. ರೈತರಿಗೆ ಹಾಗೂ ಗ್ರಾಹಕರಿಗೆ ಯಾವ ತರಹವಾದ ಅನಾನುಕೂಲವಾಗದಂತೆ ಪೈಪೋಟಿಯಿಲ್ಲದಂತೆ ಎಪಿಎಂಸಿ, ಹಾಪ್‌ಕಾಮ್ಸ್, ಹಾಗೂ ಎಸ್‌ಡಿಡಿಬಿ ಈ ಮೂರು ಯಾವ ರೀತಿಯಾಗಿ ಕಾರ್ಯವನ್ನು ಮಾಡಬೇಕೆಂದು ನಾವು ಹೇಳಬೇಕು. ಯಾವ ರೀತಿಯಾಗಿ ರೈತರಿಗೆ ಹಾಗೂ ಗ್ರಾಹಕರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವಂತಹ ವ್ಯವಸ್ಥೆಯನ್ನು ನಾವು ಮಾಡಿ ಕೊಡುತ್ತೇವೆಂದು ಇಲ್ಲಿ ಭರವಸೆಯನ್ನು ಕೊಡುತ್ತೇವೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಇಲ್ಲಿ ಮಂತ್ರಿಗಳು ಉತ್ತರ ಕೊಟ್ಟಿರುವುದನ್ನು ನೋಡಿದರೆ, ಇದರ ಬಗ್ಗೆ ರೂಪುರೇಷೆಗಳು ನಮಗೇನೂ ಗೊತ್ತಿಲ್ಲ. ಆದರೆ ಉತ್ತರದಲ್ಲಿ ಒಂದು ಸ್ಪಷ್ಟವಾಗುವುದೆಂದರೆ ಇದು ಕೇವಲ ಮಾರ್ಕೆಟಿಂಗ್ ವ್ಯವಸ್ಥೆಯನ್ನು ಮಾಡುತ್ತಾರೆ, ಅತೀ ಉತ್ತಮವಾದಂತಹ ಮಾರ್ಕೆಟಿಂಗ್‌ನ್ನು ಮಾಡುತ್ತಾರೆಂದು ಮಾತ್ರ ಇದೆ. ಇವತ್ತು ನಮ್ಮ ದೇಶ ಹಾಗೂ ರಾಜ್ಯದಲ್ಲಿರತಕ್ಕ ಪರಿಸ್ಥಿತಿ ಏನೆಂದರೆ, ಈ ವ್ಯಾಲ್ಯೂ ಅಡಿಷನ್ ಆಗುತ್ತಿಲ್ಲ, ಇದು ಪ್ರೋಸೆಸಿಂಗ್ ಆಗುತ್ತಿಲ್ಲ. ಇಡೀ ದೇಶದಲ್ಲಿ ಕೇವಲ 1.6 ರಷ್ಟು ಮಾತ್ರ ತೋಟಗಾರಿಕಾ ಬೆಳೆಗಳು ಪ್ರೋಸೆಸಿಂಗ್ ಆಗುತ್ತಿದೆ ಅದಕ್ಕೆ ಉತ್ತೇಜನವನ್ನು ಕೊಡಬೇಕಾಗಿರುತ್ತದೆ. ಈ ಮಾರ್ಕೆಟ್ ವ್ಯವಸ್ಥೆಗೆ ಕೇವಲ 150 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಪೂರ್ತಿಯಾಗಿ ಅನುಕೂಲವಾಗುವುದಿಲ್ಲ. ಇದರ ಜೊತೆಗೆ ಪ್ರೋಸೆಸಿಂಗ್ ಆಗತಕ್ಕಂಥಾದ್ದು, ಕೋಲ್ಡ್ ಸ್ಟೋರೇಜ್ ಇರತಕ್ಕಂಥಾದ್ದು ಇದಕ್ಕೂ ಕೂಡ ದಯವಿಟ್ಟು ಆದ್ಯತೆಯನ್ನು ಕೊಡುವುದರ ಬಗ್ಗೆ ಹೇಳಬೇಕಾಗುತ್ತದೆ.

ಶ್ರೀ ಅಲ್ಲಂವೀರಭದ್ರಪ್ಪ :— ಈಗಾಗಲೇ ಹೇಳಿದಂತೆ ಮುಖ್ಯವಾಗಿ ಪ್ರೋಸೆಸಿಂಗ್ ಮತ್ತು ಕೋಲ್ಡ್ ಸ್ಟೋರೇಜ್ ಸೌಲಭ್ಯಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದ್ದಾರೆ. ಇವತ್ತು ಅದನ್ನು ಖರೀದಿ ಮಾಡಿ ಪ್ರೋಸೇಸಿಂಗ್ ಯೂನಿಟ್‌ನ್ನು ಮಾಡಿ ಇವತ್ತು ಬಾಂಬೆಯ ಮೂಲಕ ಇದನ್ನು ರಫ್ತು ಮಾಡುವ ಯೋಜನೆಯೂ ಕೂಡ ಇದರಲ್ಲಿ ಇದೆ. ಈಗ ಅವರದೇ ಆದಂತಹ ವಾಹನಗಳು ಇದೆ. ಕೆಲವು ಸಮಯದಲ್ಲಿ ಬೆಂಗಳೂರಿನಲ್ಲಿ ದೊಣ್ಣೆಮೆಣಸಿನಕಾಯಿ, ಬೆಲೆ ಕಾಸ್ಟ್‌ಲಿ ಇದ್ದಾಗ ಅದನ್ನು ದೆಹಲಿಗೆ ಮುಂತಾದ ಕಡೆಗಳಿಗೆ ತೆಗೆದುಕೊಂಡು ಹೋಗುವಂತಹ ಕೆಲಸವನ್ನು ಮಾಡಿದ್ದಾರೆ. ಉತ್ತರ ಪ್ರದೇಶದ ಭಾಗದಲ್ಲಿ ಅಲ್ಲಿ ಯಾವ ತರಹದ ಬೆಳೆಗಳು ಬೆಳೆಯುತ್ತಾರೆ. ಅವರಿಗೆ ಯಾವುದು ಬೇಕಾಗಿದೆ ಅದನ್ನು ಇಲ್ಲಿ ಖರೀದಿ ಮಾಡಿ, ಅಲ್ಲಿ ಮಾರಾಟ ಮಾಡತಕ್ಕಂತಹ ವ್ಯವಸ್ಥೆಯೂ ಕೂಡ ಇದೆ. ಒಟ್ಟಾರೆಯಾಗಿ ಹೇಳುವುದಾದರೆ ನಮ್ಮ ರೈತರಿಗೆ ಹೆಚ್ಚಿನ ಬೆಲೆ ಪ್ರೋಸೆಸಿಂಗ್ ವ್ಯಾಲ್ಯೂ ಆಗಿ ಅಡಿಷನ್ ಮಾಡತಕ್ಕಂತಹ ವ್ಯವಸ್ಥೆ ಮಾಡಬೇಕೆಂಬ ಉದ್ದೇಶದಿಂದ ಇವತ್ತು ಈ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈ ಯೋಜನೆಯು ಬರುವುದೇ ಅದಕ್ಕೋಸ್ಕರ ಎಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ.